# ಮನುಷ್ಯತ್ವದ ಒರತೆ ಮಟ್ಕಾ ಮ್ಯಾನ್



ಪ್ರವೀಣ ಕುಲಕರ್ಣಿ

ಪ್ರಚಲಿತ ಜಗತ್ತಿನ ಗುಣ ಸ್ವಭಾವವನ್ನು ಒಂದೇ ಪದದಲ್ಲಿ ಹೇಳುವುದಾದರೆ 'ಸ್ವಾರ್ಥಿ' ಎನ್ನಬಹುದೇನೊ. ಕೆಸರಿನಲ್ಲಿರುವ ಕಮಲದಂತೆ ನಮ್ಮ ನಡುವೆ ಅಲ್ಲೊಬ್ಬರು ಇಲ್ಲೊಬ್ಬರು ನಿಸ್ವಾರ್ಥ ಜೀವಿಗಳೂ ಇದ್ದಾರೆ. ದೆಹಲಿಯ ಈ 'ಮಟ್ಕಾ ಮ್ಯಾನ್' ತಮ್ಮದೆಲ್ಲವನ್ನೂ ಪರರಿಗಾಗಿ ಮೀಸಲಿಟ್ಟ ಅಂತಹ ನಿಸ್ವಾರ್ಥ ಜೀವಿಗಳಲ್ಲಿ ಒಬ್ಬರು.

'ಇನ್ನೊಬ್ಬರ ನೆರವಿಗಾಗಿ ಧಾವಿಸುವುದೇ ಈ ಜೀವನದ ಗುರಿ. ಒಂದುವೇಳೆ ಸಹಾಯ ಮಾಡಲು ಆಗಲಿಲ್ಲವೇ? ಅವರಿಗೆ ನೋವು ನೀಡುವುದಂತೂ ಬೇಡ' ಎನ್ನುವ ಧ್ಯೇಯವಾಕ್ಯದೊಂದಿಗೆ ದುರ್ಬಲರ ಸೇವೆಗೆ ನಿಂತವರು ಅಲಗ್ ನಟರಾಜನ್. ಅಂದಹಾಗೆ ಅವರು ಬೆಂಗಳೂರಿನವರು. ಬದುಕಿನ ಜಟಕಾ ಬಂಡಿಯನ್ನು ಹೋಗೆಂದ ಕಡೆಗೋಡಿಸಿದ ಅವರು ಮೂರು ದಶಕಗಳವರೆಗೆ ಲಂಡನ್‌ನಲ್ಲಿ ನೆಲೆ ನಿಂತಿದ್ದರು. ಭಾರತಕ್ಕೆ ವಾಪಸ್ ಆದಮೇಲೆ ಆಯ್ದುಕೊಂಡಿದ್ದು ದೆಹಲಿಯನ್ನು.

ದೆಹಲಿಯ ಬೀದಿಗಳಲ್ಲಿ ಓಡಾಡುವಾಗ ಅಲ್ಲಿನ ಬೇಸಿಗೆಯ ದಾಹವನ್ನು ಕಣ್ಣಾರೆ ಕಂಡರು. ಬೀದಿಬದಿಯ ವ್ಯಾಪಾರಿಗಳು, ತರಕಾರಿ ಮಾರುವವರು, ಸೈಕಲ್ ಸವಾರರು, ವಾಹನ ಚಾಲಕರು, ಕಸಗುಡಿಸುವ ಪೌರಕಾರ್ಮಿಕರು ನೀರಿಲ್ಲದೆ ಒದ್ದಾಡುತ್ತಿರುವುದನ್ನು ಕಂಡು ಕಣ್ಣಲ್ಲಿ ನೀರು ತಂದುಕೊಂಡರು. ಸೀದಾ ಕುಂಬಾರರ ಓಣಿಗೆ ಹೋಗಿ ಮಜಬೂತಾದ ಮಣ್ಣಿನ ಹೂಜಿಗಳನ್ನು ತಂದರು. ಶುದ್ಧೀಕರಿಸಿದ ನೀರನ್ನು ಅವುಗಳಲ್ಲಿ ತುಂಬಿಸಿ, ಮನೆ ಮುಂದಿನ ಫುಟ್‌ಪಾತ್ ಬಳಿ ಇಟ್ಟರು. ನೀರು ಯಾವ ಪರಿ ಖಾಲಿ ಆಗತೊಡಗಿತೆಂದರೆ ದಿನಕ್ಕೆ ಮೂರು ಬಾರಿ ಅವರು ಹೂಜಿಗಳನ್ನು ತುಂಬಿಸಬೇಕಾಯಿತು. ದೆಹಲಿಯ ದಾಹ ಎಷ್ಟಿದೆ ಎಂಬ ಅಂದಾಜು ಅವರಿಗೆ ಸಿಕ್ಕಿತ್ತು.

ದಕ್ಷಿಣ ದೆಹಲಿಯಲ್ಲಿ ನೆಲಸಿರುವ ಅವರು ನೀರು ವಿತರಣೆಯ ಸೇವೆಯನ್ನು ಇನ್ನಷ್ಟು ಪ್ರದೇಶಗಳಿಗೆ ವಿಸ್ತರಿಸಲು ನಿರ್ಧರಿಸಿದರು. ಹದಿನೈದು ಕಡೆಗಳಲ್ಲಿ ಒಟ್ಟಾರೆ 90 ಹೂಜಿಗಳನ್ನು ಇಟ್ಟು, ನೀರು ತುಂಬಿಸತೊಡಗಿದರು. ಸಿರಿವಂತರು ಬಾಟಲಿಗಳಲ್ಲಿ ಕುಡಿಯುವುದಕ್ಕಿಂತಲೂ ಪರಿಶುದ್ಧವಾದ ನೀರನ್ನು ದುರ್ಬಲ ವರ್ಗದವರಿಗೆ ನೀಡಬೇಕೆಂದು ಪಣತೊಟ್ಟರು. ದೆಹಲಿ ತುಂಬಾ ಅವರು 'ಮಟ್ಕಾ ಮ್ಯಾನ್' ಎಂದೇ ಹೆಸರಾದರು. ಮಿನಿ ಟ್ರಕ್‌ವೊಂದನ್ನು ಖರೀದಿಸಿದ ಅವರು ಅದರಲ್ಲಿ ಶುದ್ಧೀಕರಣ ಘಟಕವನ್ನೂ ಟ್ಯಾಂಕರ್ ಅನ್ನೂ ಅಳವಡಿಸಿದರು. ಬೆಳ್ಳಂಬೆಳಿಗ್ಗೆ ಎದ್ದು ಎಲ್ಲಾ ಹೂಜಿಗಳನ್ನು ಶುಚಿಗೊಳಿಸುತ್ತಾ ಹೋಗುವುದು, ಬೆನ್ನಹಿಂದೆಯೇ ಶುದ್ಧ ನೀರನ್ನು ತುಂಬಿಸುತ್ತಾ ಬರುವುದು ಅವರ ದಿನಚರಿಯಾಯಿತು. ನೀರು ಕುಡಿಯಲು ಬಂದವರು ಅರೆಕ್ಷಣ ಕುಳಿತು ವಿಶ್ರಾಂತಿ ಪಡೆಯಲು ಆಸನದ ವ್ಯವಸ್ಥೆಯನ್ನೂ ಅವರು ಮಾಡಿದರು.

ಪ್ರತಿ ಹೂಜಿಯ ಮೇಲೂ ತಮ್ಮ ಮೊಬೈಲ್ ಸಂಖ್ಯೆಯನ್ನು ಮಟ್ಕಾ ಮ್ಯಾನ್ ಬರೆಯಿಸಿದರು. ನೀರು ಖಾಲಿಯಾದರೆ ಯಾರು ಕರೆ ಮಾಡಿದರೂ ನೀರವಾಹನ ಕೆಲವೇ ನಿಮಿಷಗಳಲ್ಲಿ ಅಲ್ಲಿ ಪ್ರತ್ಯಕ್ಷವಾಗತೊಡಗಿತು. ಸದ್ಯ ನಟರಾಜನ್ ಅವರು ಪ್ರತಿದಿನ ಎರಡು ಸಾವಿರ ಲೀಟರ್ ಶುದ್ಧ ನೀರನ್ನು ವಿತರಣೆ ಮಾಡುವರು. ಒಮ್ಮೆ ಹೂಜಿಗಳಿಗೆ ನೀರು ಹಾಕುವಾಗ ಅವರಲ್ಲೊಂದು ಪ್ರಶ್ನೆ ಕಾಡಿತು. ಬೀದಿ ಬದಿಯಲ್ಲಿ ಹೀಗೆ ಬೆವರು ಹರಿಸುವವರಿಗೆ ನೀರು ಕೊಟ್ಟರೆ ಸಾಕೇ ಎಂಬ ಆ ಪ್ರಶ್ನೆ ಅವರನ್ನು ಎಷ್ಟು ಕಾಡಿತೆಂದರೆ ಕೆಲವೇ ದಿನಗಳಲ್ಲಿ ಪೌಷ್ಟಿಕ ಆಹಾರ ವಿತರಣೆಯನ್ನೂ ಆರಂಭಿಸಿಬಿಟ್ಟರು. ಬೇಳೆ–ಕಾಳು, ತರಕಾರಿಯನ್ನು ಯಥೇಚ್ಛವಾಗಿ ಹೊಂದಿದ ಶುಚಿ–ರುಚಿಯಾದ ಹಾಗೂ ಅಷ್ಟೇ ಪೌಷ್ಟಿಕವಾದ ಆಹಾರ ಸಿದ್ಧಪಡಿಸಿಕೊಂಡು ವ್ಯಾನ್‌ನಲ್ಲಿ ಇಟ್ಟುಕೊಂಡು ಕಾಯಕಯೋಗಿಗಳು ಇರುವ ಜಾಗಕ್ಕೇ ಹೋಗತೊಡಗಿದರು.

ಕಾರ್ಮಿಕರೂ ಘನತೆಯಿಂದ ಊಟ ಮಾಡಬೇಕು ಎನ್ನುವುದು 'ಮಟ್ಕಾ ಮ್ಯಾನ್' ಅವರ ಆಶಯ. ವ್ಯಾನ್‌ನೊಳಗೆ ಮಡಿಚಿಡಬಹುದಾದ ಸ್ಟೂಲ್‌ಗಳನ್ನು ಜತೆಗೆ ಒಯ್ದು, ಸ್ಟೂಲ್‌ಗಳ ಮೇಲೆ ಕಾರ್ಮಿಕರನ್ನು ಕೂರಿಸಿ, ಸ್ಟೀಲ್ ತಟ್ಟೆಗಳಲ್ಲಿ ಊಟ ಬಡಿಸಿ ಕೊಡತೊಡಗಿದರು. ಊಟ ಮುಗಿಸಿದವರಿಗೆ ಹಣ್ಣುಗಳನ್ನು ತಿನ್ನಲು ಕೊಟ್ಟರು. ತಟ್ಟೆಗಳನ್ನು ತಾವೇ ಬಿಸಿನೀರಿನಲ್ಲಿ ತೊಳೆದುಕೊಂಡು, ಮತ್ತೆ ಕಾರ್ಮಿಕರನ್ನು ಹುಡುಕಿಕೊಂಡು ಮುನ್ನಡೆಯುವರು.

'ಇಷ್ಟೊಂದು ಸಮುದಾಯದ ಪ್ರೀತಿ ಬೆಳೆದಿದ್ದು ಹೇಗೆ' ಎಂದು ಕೇಳಿದಾಗ, ಮಟ್ಕಾ ಮ್ಯಾನ್ ಕೊಟ್ಟ ಉತ್ತರ ಎಲ್ಲರ ಕಣ್ಣುಗಳನ್ನೂ ತೆರೆಸುವಂತಿದೆ. 'ಪ್ರತಿಯೊಬ್ಬ ಮನುಷ್ಯನೂ ಈ ಸಮಾಜಕ್ಕೆ ತನ್ನ ಕೈಯಿಂದ ಆದ ನೆರವು ನೀಡಬೇಕು. ಅದು ಎಷ್ಟೇ ಚಿಕ್ಕದಾದರೂ ಪರವಾಗಿಲ್ಲ. ದುರದೃಷ್ಟವಶಾತ್ ಹಪಹಪಿ ತುಂಬಿದ, ಸ್ವಾರ್ಥದ ರಾಜ್ಯಭಾರವೇ ಹೆಚ್ಚಿರುವ ಸಮುದಾಯದ ನಡುವೆ ನಾವಿದ್ದೇವೆ. ದುರ್ಬಲರು, ಸಮಾಜದ ಒಳಿತಿಗಾಗಿ ಅಲ್ಪ ವೇತನಕ್ಕೆ ಶ್ರಮಿಸುತ್ತಿರುವವರು ತೀವ್ರ ಅಸಮಾನತೆಯ ಕಂದರದ ಅಂಚಿನಲ್ಲಿ ಅಸಹಾಯಕರಾಗಿ ನಿಂತಿದ್ದಾರೆ. ಒಂದು ಒಳ್ಳೆಯ ಊಟ ಮಾಡಲು, ಸಕಾಲಕ್ಕೆ ಸರಿಯಾಗಿ ಬಾಯಾರಿಕೆ ನೀಗಿಸಿಕೊಳ್ಳಲು ಸಹ ಅವರಿಗೆ ಆಗುತ್ತಿಲ್ಲ. ಅವರ ಬದುಕನ್ನು ಸಹನೀಯಗೊಳಿಸಲು ಇದೊಂದು ನನ್ನ ಅಳಿಲು ಸೇವೆ' ಎಂದು ಹೇಳುತ್ತಾರೆ.

ದೆಹಲಿಯಲ್ಲಿ ಸೈಕಲ್ ಮೇಲೆ ಓಡಾಡುವ ಕಾರ್ಮಿಕರ ಸಂಖ್ಯೆ ದೊಡ್ಡದಿದೆ. 'ಮಟ್ಕಾ ಮ್ಯಾನ್' ಪ್ರೀತಿಯು ಅವರ ಮೇಲೂ ಹರಿದಿದೆ. ಸೈಕಲ್ ಗಾಲಿಗೆ ಹವಾ ಹಾಕಲು ನೂರು ಕಡೆ ಪಂಪ್ ಸ್ಟೇಶನ್‌ಗಳ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಪಂಪ್ ಸ್ಟೇಶನ್‌ಗಳ ಮುಂದೆ ನಿಂತು ಸೈಕಲ್ ಗಾಲಿಗಳಿಗೆ ಹವಾ ತುಂಬಿಸಿಕೊಂಡು ಸವಾರರು ಮುಂದೆ ಹೊರಡುವುದು ನಟರಾಜನ್ ಅವರಿಗೆ ಹಬ್ಬದಂತೆ ಕಾಣುವುದಂತೆ. ಲಂಡನ್‌ನಲ್ಲಿ ಪುಸ್ತಕದ ಅಂಗಡಿಯನ್ನು ಹೊಂದಿದ್ದ ಅವರು, ಕ್ಯಾನ್ಸರ್ ಕಾಯಿಲೆಗೆ ಒಳಗಾದ ಮೇಲೆ ವ್ಯಾಪಾರವನ್ನು ಬರ್ಖಾಸ್ತುಗೊಳಿಸಿ ಭಾರತಕ್ಕೆ ಬಂದರು. ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾದರು. ಪತ್ನಿಯೊಂದಿಗೆ ದೆಹಲಿಯಲ್ಲಿ ತಂಗಿದ ಅವರು, ತಮ್ಮ ಜೀವಮಾನದ ಗಳಿಕೆಯನ್ನೆಲ್ಲ ಸಮಾಜ ಸೇವೆಗೆ ಮುಡಿಪಾಗಿ ಇಟ್ಟಿದ್ದಾರೆ. ಅವರಿಗೆ ಒಬ್ಬಳೇ ಪುತ್ರಿ. 'ಮಗಳಿಗೆ ಏನೂ ಉಳಿಸುವುದಿಲ್ಲವೇ' ಎಂದು ಕೇಳಿದರೆ, 'ಅವಳು ಸ್ವತಂತ್ರವಾಗಿ ಬಾಳಿ, ಬದುಕುವಷ್ಟು ಅವಳನ್ನು ಓದಿಸಿದ್ದೇನೆ. ಅಗತ್ಯ ಬೆಂಬಲವನ್ನೂ ನೀಡಿದ್ದೇನೆ. ನನ್ನಿಂದ ಅವಳಿಗೆ ಇನ್ನೇನೂ ಆಗಬೇಕಾಗಿದ್ದಿಲ್ಲ. ಅವಳೇ ನನ್ನ ಕೆಲಸಕ್ಕೆ ಸಹಾಯ ಮಾಡಬೇಕಷ್ಟೆ' ಎನ್ನುತ್ತಾರೆ. ಮಟ್ಕಾ ಮ್ಯಾನ್‌ಗೆ ಯಾರೇ ನೆರವು ನೀಡಲು ಮುಂದಾದರೂ ಸ್ವೀಕರಿಸುತ್ತಾರೆ. ಆ ಹಣವನ್ನು ಶ್ರಮಿಕರ ಕಲ್ಯಾಣಕ್ಕಾಗಿ ವಿನಿಯೋಗಿಸುತ್ತಾರೆ. ನಿಸ್ವಾರ್ಥ ಬದುಕಿಗೆ ಜೀವಂತ ವ್ಯಾಖ್ಯಾನವಾಗಿ ನಮ್ಮ ಮುಂದಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65